## ಪುರಾತನ ಉಪ್ಪರಿಗೆ ಮೆಟ್ಟಿಲುಗಳು

ಮಲೆನಾಡಿನಲ್ಲಿ ಪುರಾತನ ಮನೆಗಳ ಉಪ್ಪರಿಗೆಯ ಮರದ ಮೆಟ್ಟಿಲುಗಳು ಇಂದಿಗೂ ತನ್ನ ವಿಶಿಷ್ಟತೆಯನ್ನು ಉಳಿಸಿಕೊಂಡಿವೆ. ಬೆಲೆ ಬಾಳುವ ಮರಗಳಿಂದ ನಿರ್ಮಿಸುತ್ತಿದ್ದ ಉಪ್ಪರಿಗೆಯ ಮೆಟ್ಟಿಲುಗಳು ಇಂದಿಗೂ ಎಲ್ಲೆಡೆ ಕಂಡು ಬರುತ್ತದೆ. ಕಾಲಕ್ಕೆ ತಕ್ಕಂತೆ ಮನೆಗಳು ಬದಲಾದ ಹಿನ್ನೆಲೆಯಲ್ಲಿ ಇಂತಹ ಮೆಟ್ಟಿಲುಗಳು ಅಪರೂಪವಾಗುತ್ತಿವೆ. ತೀರ್ಥಹಳ್ಳಿಯ ರಥಬೀದಿಯ ದಿ. ಮಂಜುನಾಥ್ ಭಟ್ಟರ ಮನೆಯ ಉಪ್ಪರಿಗೆಯ ಮೆಟ್ಟಿಲು ಕಾಣಬಹುದಾಗಿದ್ದು, ಈ ಮನೆಯು ಈಗ ಇಲ್ಲಿನ ತಿರುಮಲ ವೆಂಕಟರಮಣ ದೇವಾಲಯದ ಸುಪರ್ದಿಯಲ್ಲಿದೆ.

—ರಾಂಚಂದ್ರಕೊಪ್ಪಲು, ತೀರ್ಥಹಳ್ಳಿ





## ಶಿಲಾ ಶಂಖ

ದಕ್ಷಿಣಕನ್ನಡದ ಬಂಟ್ವಾಳ ತಾಲ್ಲೂಕಿನ ಪೊಳಲಿಯಲ್ಲಿ ಪ್ರಸಿದ್ಧ ರಾಜರಾಜೇಶ್ವರಿ ದೇವಸ್ಥಾನವಿದೆ. ಸನಿಹದಲ್ಲೇ ಪ್ರಾಕೃತಿಕ ಸೌಂದರ್ಯದ ಮಡಿಲಲ್ಲಿ 'ಶ್ರೀರಾಮಕೃಷ್ಣ ತಪೋವನ' ಶ್ರದ್ಧಾಕೇಂದ್ರವೂ ಇದೆ. ಅಲ್ಲಿ ಸಾಧು ಸಂತರು ಮೊಕ್ಕಾಂ ಹೂಡಲು, 'ಸಾಧು ನಿವಾಸ' ಛತ್ರವೊಂದು ನಿರ್ಮಿಸಲಾಗಿದೆ. ಇಲ್ಲಿರುವ ಶಾರದಾದೇವಿ ಮಂದಿರದ ಎದುರುಗಡೆ ಶಿಲಾಪೀಠದ ಮೇಲೆ ಸ್ಥಾಪಿಸಿರುವ, ಸುಮಾರು ಮೂರು ಅಡಿ ಎತ್ತರದ ಶಂಖವೊಂದು ಯಾತ್ರಾರ್ಥಿಗಳ ಗಮನ ಸೆಳೆಯುತ್ತದೆ. ಬಿಳಿ ವರ್ಣದ ಶಿಲೆ ಕಲ್ಲನ್ನು ಬಳಸಿಕೊಂಡು ಶಿಲ್ಪಿಯು ನಿರ್ಮಿಸಿದ ಶಂಖ ಇದಾಗಿದೆ.

—ತಾರಾನಾಥ್ ಮೇಸ್ತ ಶಿರೂರು, ಉಡುಪಿ



## ರಾಮಾದಿಗಳ ಚಂದನದ ಬೊಂಬೆಗಳು

ಚಂದನದ ಬೊಂಬೆಗಳೆಂದರೆ ಪಟ್ಟದ ಬೊಂಬೆಗಳು ಅಥವಾ ರಾಜರಾಣಿ ಬೊಂಬೆಗಳಾಗಿರುವುದು ಸಾಮಾನ್ಯ. ಆದರೆ, ಹರಿಹರದ ಸಾಹಿತಿ ಲಲಿತಮ್ಮ ಚಂದ್ರಶೇಖರ್ ಅವರ ಮನೆಯಲ್ಲಿರುವ ಕಪ್ಪು ಬಣ್ಣದ ರಾಮಾದಿಗಳ ಚಂದನದ ಬೊಂಬೆಗಳು ಆಕರ್ಷಿಸುತ್ತವೆ. ಜೊತೆಗೆ ಈ ಅಪರೂಪದ ಬೊಂಬೆಗಳು ಬಂಗಾರದ ಬಣ್ಣದಿಂದ ಅಲಂಕಾರಗೊಂಡು ಸೆಳೆಯುವಂತಿವೆ. ಧನುರ್ಧಾರಿಗಳಾದ ಶ್ರೀರಾಮ, ಲಕ್ಷ್ಮಣ, ಕಮಲದ ಹೂವನ್ನು ಹಿಡಿದ ಸೀತೆ, ಕೈಮುಗಿದು ನಿಂತ ಹನುಮಂತನ ಬೊಂಬೆಗಳು ನಿಂತಿರುವ ಕಮಲದ ಹೂವಿನ ಪೀಠವೂ ಅತ್ಯಂತ ಸುಂದರವಾಗಿದೆ.

—ಸೀತಾ ಎಸ್. ನಾರಾಯಣ, ಹರಿಹರ